ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

**ಸಂಖ್ಯೆ: ಕವಿಪ್ರನಿನಿ/ಬಿ16/21723/2021-22** ದಿನಾಂಕ : 22 FEB 2022

## ಅಧಿಸೂಚನೆ

**ವಿಷಯ:** ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಬಗ್ಗೆ.

**ಉಲ್ಲೇಖ:** ದಿನಾಂಕ: 18.11.2021 ರಂದು ನಡೆದ ನಿಗಮದ ನಿರ್ದೇಶಕರುಗಳ 126ನೇ ಮಂಡಳಿ ಸಭೆಯ ವಿಷಯ ಸಂಖ್ಯೆ: 126/31 ರಲ್ಲಿನ ನಿರ್ಣಯ.

*****

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳಿಗೆ ಈ ಕೆಳಕಂಡಂತೆ ತಿದ್ದುಪಡಿ ಮಾಡಲು ಇಚ್ಛಿಸುತ್ತದೆ:-

1. **<u>ಶೀರ್ಷಿಕೆ ಮತ್ತು ಆರಂಭ:-</u>**

(ಅ) ಈ ನಿಯಮಗಳನ್ನು ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ (ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(ಆ) ಈ ತಿದ್ದುಪಡಿಯು, **ದಿನಾಂಕ: 18.11.2021 ರಿಂದ** ಅನ್ವಯವಾಗುವಂತೆ ಜಾರಿಗೆ ಬಂದಿರುತ್ತದೆ.

2. **<u>ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳ ಅಧ್ಯಾಯ-1 ರ ಕ್ರಮ ಸಂಖ್ಯೆ: 6 ಕ್ಕೆ ಸೇರ್ಪಡೆ:-</u>**

ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳ ಅಧ್ಯಾಯ-1 ರ ಕ್ರಮ ಸಂಖ್ಯೆ: **6(ಡಿ)** ನಂತರ ಕ್ರಮ ಸಂಖ್ಯೆ: **6(ಇ)** ಅನ್ನು ಈ ಕೆಳಕಂಡಂತೆ ಹೊಸದಾಗಿ ಸೇರ್ಪಡೆ ಮಾಡಿಕೊಳ್ಳಲಾಗಿದೆ:-

> "ಆದಾಗ್ಯೂ, ಉಪನಿಯಮಗಳು ಸೇರಿದಂತೆ ಈ ನಿಯಮ-6 ಅಥವಾ ಇತರೆ ಯಾವುದೇ ನಿಯಮ ಯಾವುದನ್ನೇ ಒಳಗೊಂಡಿದ್ದರೂ, ಆಪ್ಟಿಟ್ಯೂಡ್ ಪರೀಕ್ಷೆಯು ಆಯ್ಕೆಗೆ ಆಧಾರವಾಗಿದ್ದಲ್ಲಿ, ಅಭ್ಯರ್ಥಿಗಳು ಪಡೆದುಕೊಂಡ ಅಂಕಗಳು, ಆಪ್ಟಿಟ್ಯೂಡ್ ಪರೀಕ್ಷೆಗೆ ನಿಗದಿಪಡಿಸಿರುವ ಒಟ್ಟು ಅಂಕಗಳ ಶೇಕಡ 35 ಕ್ಕಿಂತ ಕಡಿಮೆ ಇರಬಾರದು."
>
> *"Notwithstanding anything contained under the Regulation-6 or under any other Regulation, where the Aptitude Test is the basis of selection, then the marks so secured by the candidates shall not be less than Thirty Five (35) percent of the total marks,"*

3. **<u>ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳ ಅಧ್ಯಾಯ-1 ರ ಕ್ರಮ ಸಂಖ್ಯೆ: 8(5) ಕ್ಕೆ ತಿದ್ದುಪಡಿ:-</u>**

ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳ ಅಧ್ಯಾಯ-1 ರ ಕ್ರಮ ಸಂಖ್ಯೆ: **8(5)** ಕ್ಕೆ ಈ ಅಧಿಸೂಚನೆಗೆ ಲಗತ್ತಿಸಿರುವ **ಅನುಬಂಧ-1** ರಲ್ಲಿ ತಿಳಿಸಿರುವಂತೆ ತಿದ್ದುಪಡಿ ಮಾಡಲಾಗಿದೆ.

**4. <u>ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳ ಅಧ್ಯಾಯ–6 ರ ಕ್ರಮ ಸಂಖ್ಯೆ: 10ಎ, 11ಎ ಹಾಗೂ ಅಧ್ಯಾಯ–7 ರ ಕ್ರಮ ಸಂಖ್ಯೆ: 8(ಎ)(i) ಕ್ಕೆ ತಿದ್ದುಪಡಿ:–</u>**

ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳ ಅಧ್ಯಾಯ–6 ರ ಕ್ರಮ ಸಂಖ್ಯೆ: 10ಎ, 11ಎ ಹಾಗೂ ಅಧ್ಯಾಯ–7 ರ ಕ್ರಮ ಸಂಖ್ಯೆ: 8(ಎ)(i) ರಲ್ಲಿ ನೇರ ನೇಮಕಾತಿ ಕೋಟಾದಲ್ಲಿ ಕ್ರಮವಾಗಿ ಸಹಾಯಕ ಇಂಜಿನಿಯರ್(ವಿದ್ಯುತ್), ಸಹಾಯಕ ಇಂಜಿನಿಯರ್(ಸಿವಿಲ್) ಮತ್ತು ಕಿರಿಯ ಸಹಾಯಕ ಹುದ್ದೆಗಳ ನೇರ ನೇಮಕಾತಿಗೆ ನಿಗದಿಪಡಿಸಿರುವ ಕನಿಷ್ಠ ಅರ್ಹತೆಗೆ ಈ ಅಧಿಸೂಚನೆಗೆ ಲಗತ್ತಿಸಿರುವ **ಅನುಬಂಧ–2, 3 ಮತ್ತು 4** ರಲ್ಲಿ ತಿಳಿಸಿರುವಂತೆ ತಿದ್ದುಪಡಿ ಮಾಡಲಾಗಿದೆ.

'ಆದೇಶದ ಮೇರೆಗೆ',

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**<u>ಗೆ</u> :**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಕವಿಪ್ರನಿನಿ/ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

   <u>https://kptcl.karnataka.gov.in/</u> for information of:
6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**<u>ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ</u> :**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/21723/2021-22, ದಿನಾಂಕ 22 FEB 2022 ರ ಅನುಬಂಧ-1**

**Annexure-1 to Notification No: KPTCL/B16/21723/2021-22, Dated:**

**ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳ ಅಧ್ಯಾಯ-1 ರ ಕ್ರಮ ಸಂಖ್ಯೆ: 8(5) ಕ್ಕೆ ತಿದ್ದುಪಡಿ**

**AMENDMENT TO SL.NO.8(5) UNDER CHAPER-I OF KPTCL RECRUITMENT AND PROMOTION REGULATIONS, EMPLOYEES (PROBATION) REGULATIONS AND EMPLOYEES (SENIORITY) REGULATIONS**

| ಹಾಲಿ ಚಾಲ್ತಿಯಲ್ಲಿರುವುದು (As Existing) | ತಿದ್ದುಪಡಿಗೊಂಡಿರುವುದು (Amended As) |
|---|---|
| **8(5):** ಈ ನಿಯಮಗಳಲ್ಲಿ ಯಾವುದನ್ನೇ ಒಳಗೊಂಡಿದ್ದರೂ, ಯಾವುದೇ ಅಭ್ಯರ್ಥಿಯು ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹತೆ ಪಡೆಯದ ಹೊರತು **ಗುಂಪು – ಎ ಮತ್ತು ಬಿ** ಹುದ್ದೆಗಳ ಆಯ್ಕೆಗೆ ಅರ್ಹರಾಗುವುದಿಲ್ಲ. ಈ ಪರೀಕ್ಷೆಯು ಗರಿಷ್ಠ 150 ಅಂಕಗಳನ್ನು ಹೊಂದಿರುವ ಒಂದು ಪತ್ರಿಕೆಯನ್ನು ಒಳಗೊಂಡಿರುತ್ತದೆ. ಈ ಪರೀಕ್ಷೆಯಲ್ಲಿ ಅರ್ಹತೆ ಪಡೆಯಲು ಅಭ್ಯರ್ಥಿಯು ಕನಿಷ್ಠ 50 ಅಂಕಗಳನ್ನು ಗಳಿಸಬೇಕು. ಈ ಪತ್ರಿಕೆಯು ಎಸ್.ಎಸ್.ಎಲ್.ಸಿ. ಕನ್ನಡ ಮೊದಲನೇ ಭಾಷೆಯ ಮಟ್ಟದ್ದಾಗಿರುತ್ತದೆ.<br><br>**ಟಿಪ್ಪಣಿ:** ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅಥವಾ ಅದಕ್ಕೆ ಸಮನಾದುದೆಂದು ರಾಜ್ಯ ಸರ್ಕಾರದಿಂದ ಘೋಷಿಸಲಾದ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್.ಎಲ್.ಸಿ ಪರೀಕ್ಷೆಗಿಂತ ಮೇಲ್ದರ್ಜೆಯ ಯಾವುದೇ ಪರೀಕ್ಷೆಯಲ್ಲಿ ಅಭ್ಯರ್ಥಿಯು ಕನ್ನಡವನ್ನು ಪ್ರಮುಖ ಭಾಷೆಯಾಗಿ ಅಥವಾ ಎರಡನೇ ಭಾಷೆಯಾಗಿ ಅಥವಾ ಐಚ್ಛಿಕ ವಿಷಯವಾಗಿ (ಆದರೆ ಸಂಯುಕ್ತ ಪತ್ರಿಕೆಯ ವಿಷಯಗಳಲ್ಲೊಂದಾಗಿರಬಾರದು) ಅಥವಾ **ಕನ್ನಡ ಮಾಧ್ಯಮದಲ್ಲಿ** ವ್ಯಾಸಂಗ ಮಾಡಿ ತೇರ್ಗಡೆಯಾಗಿದ್ದಲ್ಲಿ, ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣತೆ ಹೊಂದುವುದರಿಂದ ವಿನಾಯಿತಿ ಹೊಂದಿರುತ್ತಾರೆ.<br><br>*8(5): Notwithstanding anything contained in the Regulations no candidate shall be eligible for selection in respect of* ***<u>Group-A & B</u>*** *posts unless he/she qualifies in a test in Kannada Language. This test shall comprise of one paper carrying maximum of 150 marks. For qualifying in this paper a candidate must score minimum of 50 marks. The standard of this paper shall be that of first language Kannada at SSLC Level.*<br><br>***<u>Note:</u>*** *Provided that candidates who have passed the SSLC examination or any examination declared as equivalent to by the State Government or any examination higher than SSLC examinations in which Kannada is the main language or second* | **8(5):** ಈ ನಿಯಮಗಳಲ್ಲಿ ಯಾವುದನ್ನೇ ಒಳಗೊಂಡಿದ್ದರೂ, ಯಾವುದೇ ಅಭ್ಯರ್ಥಿಯು ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹತೆ ಪಡೆಯದ ಹೊರತು **ಗುಂಪು – ಎ, ಬಿ ಮತ್ತು ಸಿ** ಹುದ್ದೆಗಳ ಆಯ್ಕೆಗೆ ಅರ್ಹರಾಗುವುದಿಲ್ಲ. ಈ ಪರೀಕ್ಷೆಯು ಗರಿಷ್ಠ 150 ಅಂಕಗಳನ್ನು ಹೊಂದಿರುವ ಒಂದು ಪತ್ರಿಕೆಯನ್ನು ಒಳಗೊಂಡಿರುತ್ತದೆ. ಈ ಪರೀಕ್ಷೆಯಲ್ಲಿ ಅರ್ಹತೆ ಪಡೆಯಲು ಅಭ್ಯರ್ಥಿಯು ಕನಿಷ್ಠ 50 ಅಂಕಗಳನ್ನು ಗಳಿಸಬೇಕು. ಈ ಪತ್ರಿಕೆಯು ಎಸ್.ಎಸ್.ಎಲ್.ಸಿ. ಕನ್ನಡ ಮೊದಲನೇ ಭಾಷೆಯ ಮಟ್ಟದ್ದಾಗಿರುತ್ತದೆ.<br><br>**ಟಿಪ್ಪಣಿ:** ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅಥವಾ ಅದಕ್ಕೆ ಸಮನಾದುದೆಂದು ರಾಜ್ಯ ಸರ್ಕಾರದಿಂದ ಘೋಷಿಸಲಾದ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್.ಎಲ್.ಸಿ ಪರೀಕ್ಷೆಗಿಂತ ಮೇಲ್ದರ್ಜೆಯ ಯಾವುದೇ ಪರೀಕ್ಷೆಯಲ್ಲಿ ಅಭ್ಯರ್ಥಿಯು ಕನ್ನಡವನ್ನು ಪ್ರಮುಖ ಭಾಷೆಯಾಗಿ ಅಥವಾ ಎರಡನೇ ಭಾಷೆಯಾಗಿ ಅಥವಾ ಐಚ್ಛಿಕ ವಿಷಯವಾಗಿ (ಆದರೆ ಸಂಯುಕ್ತ ಪತ್ರಿಕೆಯ ವಿಷಯಗಳಲ್ಲೊಂದಾಗಿರಬಾರದು) ಅಥವಾ **ಕನ್ನಡ ಮಾಧ್ಯಮದಲ್ಲಿ** ವ್ಯಾಸಂಗ ಮಾಡಿ ತೇರ್ಗಡೆಯಾಗಿದ್ದಲ್ಲಿ, ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣತೆ ಹೊಂದುವುದರಿಂದ ವಿನಾಯಿತಿ ಹೊಂದಿರುತ್ತಾರೆ.<br><br>*8(5): Notwithstanding anything contained in the Regulations no candidate shall be eligible for selection in respect of* ***<u>Group-A, B & C</u>*** *posts unless he/she qualifies in a test in Kannada Language. This test shall comprise of one paper carrying maximum of 150 marks. For qualifying in this paper a candidate must score minimum of 50 marks. The standard of this paper shall be that of first language Kannada at SSLC Level.*<br><br>***<u>Note:</u>*** *Provided that candidates who have passed the SSLC examination or any examination declared as equivalent to by the State Government or any examination higher than SSLC examinations in which Kannada is the main language or second* |

| | |
|---|---|
| *language or an optional subject (but not one of the subjects in a composite paper) or if they have studied and passed in Kannada Medium are exempted from passing the compulsory Kannada Language Test".* | *language or an optional subject (but not one of the subjects in a composite paper) or if they have studied and passed in Kannada Medium are exempted from passing the compulsory Kannada Language Test".* |

ನಿರ್ದೇಶಕರು (ಆ. ಮತ್ತು ಮಾ.ಸಂ.)
ಕವಿಪ್ರನಿನಿ

## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/21723/2021-22, ದಿನಾಂಕ: 22 FEB 2022 ಅನುಬಂಧ-2

**Annexure-2 to Notification No: KPTCL/B16/21723/2021-22, Dated:**

**ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳ ಅಧ್ಯಾಯ-6 ರ ಕ್ರಮ ಸಂಖ್ಯೆ: 10(ಎ)- ಸಹಾಯಕ ಇಂಜಿನಿಯರ್(ವಿದ್ಯುತ್) ಹುದ್ದೆಯ ಕನಿಷ್ಠ ಅರ್ಹತೆಗೆ ತಿದ್ದುಪಡಿ**

**AMENDMENT TO MINIMUM QUALIFICATION PRESCRIBED FOR THE POST OF ASSISTANT ENGINEER (ELEC.) IN SL.NO.10(A) UNDER CHAPER-VI OF KPTCL RECRUITMENT AND PROMOTION REGULATIONS, EMPLOYEES (PROBATION) REGULATIONS AND EMPLOYEES (SENIORITY) REGULATIONS**

| ಕ್ರ.ಸಂ.<br>Sl.No. | ಹುದ್ದೆಯ ಹೆಸರು<br>Name of the Post | ಕನಿಷ್ಠ ಅರ್ಹತೆ (Minimum Qualification) | |
|---|---|---|---|
| | | ಹಾಲಿ ಚಾಲ್ತಿಯಲ್ಲಿರುವುದು (As Existing) | ತಿದ್ದುಪಡಿಗೊಂಡಿರುವುದು (Amended As) |
| 10(ಎ)<br>10(A) | ಸಹಾಯಕ ಇಂಜಿನಿಯರ್(ವಿ)<br>Assistant Engineer (Elec.) | (i) ಮನ್ನಣೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ/ಸಂಸ್ಥೆಯ (ಎ.ಐ.ಸಿ.ಟಿ.ಇ ಇಂದ ಮಾನ್ಯತೆ ಪಡೆದಿರುವಂತಹ) ಎಲೆಕ್ಟ್ರಿಕಲ್/ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್‌ನಲ್ಲಿ ಬಿ.ಇ/ಬಿ.ಟೆಕ್ ಪದವಿ ಅಥವಾ ಎ.ಎಂ.ಐ.ಇ. (ಭಾರತ) (ಭಾಗ-ಎ ಮತ್ತು ಬಿ ಎಲೆಕ್ಟ್ರಿಕಲ್) ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ಪ್ರಸರಣ ಮತ್ತು ವಿತರಣಾ ವ್ಯವಸ್ಥೆಗೆ ಸಂಬಂಧಿಸಿದ ತತ್ಸಮಾನ ಇಂಜಿನಿಯರಿಂಗ್ ಪದವಿ.<br><br>(i) Should possess/acquired BE/B.Tech. in Electrical/Electrical & Electronics Engineering of a recognized University/Institution (Recognized by AICTE) or pass in AMIE (India) (Section A & B Electrical) examination OR any equivalent Engineering Degree relevant to Transmission & Distribution utilities. | (i) ಮನ್ನಣೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ/ಸಂಸ್ಥೆಯ (ಎ.ಐ.ಸಿ.ಟಿ.ಇ ಇಂದ ಮಾನ್ಯತೆ ಪಡೆದಿರುವಂತಹ) ಎಲೆಕ್ಟ್ರಿಕಲ್/ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್‌ನಲ್ಲಿ ಬಿ.ಇ/ಬಿ.ಟೆಕ್ ನಲ್ಲಿ ಪದವಿ ಅಥವಾ ಎ.ಎಂ.ಐ.ಇ. (ಭಾರತ) (ಭಾಗ-ಎ ಮತ್ತು ಬಿ ಎಲೆಕ್ಟ್ರಿಕಲ್) ಪರೀಕ್ಷೆಯಲ್ಲಿ ಉತ್ತೀರ್ಣತೆ.<br><br>(i) Should possess/acquired BE/B.Tech. in Electrical/Electrical & Electronics Engineering of a recognized University/ Institution (Recognized by AICTE) or pass in AMIE (India) (Section A & B Electrical) examination. |

ಇನ್ನುಳಿದಂತೆ, ಕ್ರಮ ಸಂಖ್ಯೆ: 10(ಎ)-ಸಹಾಯಕ ಇಂಜಿನಿಯರ್(ವಿ) ಹುದ್ದೆಗೆ ಸಂಬಂಧಿಸಿದಂತೆ ನೌಕರಿ ಭರ್ತಿ ವಿಧಾನ ಮತ್ತು ಕನಿಷ್ಠ ಅರ್ಹತೆಯ ಇತರೆ ಅಂಶಗಳಿಗೆ ಯಾವುದೇ ಬದಲಾವಣೆಗಳಿರುವುದಿಲ್ಲ.

ನಿರ್ದೇಶಕರು (ಆ. ಮತ್ತು ಮಾ.ಸಂ.)
ಕವಿಪ್ರನಿನಿ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/21723/2021-22, ದಿನಾಂಕ: 22 FEB 2022 ರ ಅನುಬಂಧ-3

**Annexure-3 to Notification No: KPTCL/B16/21723/2021-22, Dated:**

**ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳ ಅಧ್ಯಾಯ-6 ರ ಕ್ರಮ ಸಂಖ್ಯೆ: 11(ಎ)- ಸಹಾಯಕ ಇಂಜಿನಿಯರ್(ಸಿವಿಲ್) ಹುದ್ದೆಯ ಕನಿಷ್ಠ ಅರ್ಹತೆಗೆ ತಿದ್ದುಪಡಿ**

**AMENDMENT TO MINIMUM QUALIFICATION PRESCRIBED FOR THE POST OF ASSISTANT ENGINEER (CIVIL) IN SL.NO.11(A) UNDER CHAPER-VI OF KPTCL RECRUITMENT AND PROMOTION REGULATIONS, EMPLOYEES (PROBATION) REGULATIONS AND EMPLOYEES (SENIORITY) REGULATIONS**

| ಕ್ರ.ಸಂ.<br>Sl.No. | ಹುದ್ದೆಯ ಹೆಸರು<br>Name of the Post | ಕನಿಷ್ಠ ಅರ್ಹತೆ (Minimum Qualification) | |
|---|---|---|---|
| | | ಹಾಲಿ ಚಾಲ್ತಿಯಲ್ಲಿರುವುದು (As Existing) | ತಿದ್ದುಪಡಿಗೊಂಡಿರುವುದು (Amended As) |
| 11(ಎ)<br>11(A) | ಸಹಾಯಕ ಇಂಜಿನಿಯರ್(ಸಿವಿಲ್)<br>Assistant Engineer (Civil) | (i) ಮನ್ನಣೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ/ಸಂಸ್ಥೆಯ (ಎ.ಐ.ಸಿ.ಟಿ.ಇ ಇಂದ ಮಾನ್ಯತೆ ಪಡೆದಿರುವಂತಹ) ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ./ಬಿ.ಟೆಕ್ ಪದವಿ ಅಥವಾ ಎ.ಎಂ.ಐ.ಇ. (ಭಾರತ) (ಭಾಗ-ಎ ಮತ್ತು ಬಿ ಸಿವಿಲ್) ಪರೀಕ್ಷೆಯಲ್ಲಿ ಉತ್ತೀರ್ಣತೆ. ಅಥವಾ ಪ್ರಸರಣ ಮತ್ತು ವಿತರಣಾ ವ್ಯವಸ್ಥೆಗೆ ಸಂಬಂಧಿಸಿದ ತತ್ಸಮಾನ ಸಿವಿಲ್ ಇಂಜಿನಿಯರಿಂಗ್ ಪದವಿ.<br><br>(i) Should possess/acquired BE/B.Tech. in Civil Engineering of a recognized University/Institution (Recognized by AICTE) or pass in AMIE (India) (Section A & B Civil) examination OR any equivalent Engineering Degree relevant to Transmission & Distribution utilities in Civil Engineering discipline. | (i) ಮನ್ನಣೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ/ಸಂಸ್ಥೆಯ (ಎ.ಐ.ಸಿ.ಟಿ.ಇ ಇಂದ ಮಾನ್ಯತೆ ಪಡೆದಿರುವಂತಹ) ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ./ಬಿ.ಟೆಕ್ ಪದವಿ ಅಥವಾ ಎ.ಎಂ.ಐ.ಇ. (ಭಾರತ) (ಭಾಗ-ಎ ಮತ್ತು ಬಿ ಸಿವಿಲ್) ಪರೀಕ್ಷೆಯಲ್ಲಿ ಉತ್ತೀರ್ಣತೆ.<br><br>(i) Should possess/acquired BE/B.Tech. in Civil Engineering of a recognized University/Institution (Recognized by AICTE) or pass in AMIE (India) (Section A & B Civil) examination. |

ಇನ್ನುಳಿದಂತೆ, ಕ್ರಮ ಸಂಖ್ಯೆ: 11 (ಎ)-ಸಹಾಯಕ ಇಂಜಿನಿಯರ್(ಸಿವಿಲ್) ಹುದ್ದೆಗೆ ಸಂಬಂಧಿಸಿದಂತೆ ನೌಕರಿ ಭರ್ತಿ ವಿಧಾನ ಮತ್ತು ಕನಿಷ್ಠ ಅರ್ಹತೆಯ ಇತರೆ ಅಂಶಗಳಿಗೆ ಯಾವುದೇ ಬದಲಾವಣೆಗಳಿರುವುದಿಲ್ಲ.

ನಿರ್ದೇಶಕರು (ಆ. ಮತ್ತು ಮಾ.ಸಂ.)
ಕವಿಪ್ರನಿನಿ

## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/21723/2021-22, ದಿನಾಂಕ: 22 FEB 2022 ರ ಅನುಬಂಧ-4

**Annexure-4 to Notification No: KPTCL/B16/21723/2021-22, Dated:**

**ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳ ಅಧ್ಯಾಯ-7 ರ ಕ್ರಮ ಸಂಖ್ಯೆ: 8(ಎ)(i) – ಕಿರಿಯ ಸಹಾಯಕ ಹುದ್ದೆಯ ಕನಿಷ್ಠ ಅರ್ಹತೆಗೆ ತಿದ್ದುಪಡಿ**

**AMENDMENT TO MINIMUM QUALIFICATION PRESCRIBED FOR THE POST OF JUNIOR ASSISTANT IN SL.NO.8 (A)(i) UNDER CHAPER-VII OF KPTCL RECRUITMENT AND PROMOTION REGULATIONS, EMPLOYEES (PROBATION) REGULATIONS AND EMPLOYEES (SENIORITY) REGULATIONS**

| ಕ್ರ.ಸಂ.<br>Sl.No. | ಹುದ್ದೆಯ ಹೆಸರು<br>Name of the Post | ಕನಿಷ್ಠ ಅರ್ಹತೆ (Minimum Qualification) | |
|---|---|---|---|
| | | ಹಾಲಿ ಚಾಲ್ತಿಯಲ್ಲಿರುವುದು (As Existing) | ತಿದ್ದುಪಡಿಗೊಂಡಿರುವುದು (Amended As) |
| 8(ಎ)(i)<br>8(A)(i) | ಕಿರಿಯ ಸಹಾಯಕ<br>Junior Assistant | (i) ಪಿ.ಯು.ಸಿ. ವಿದ್ಯಾರ್ಹತೆ ಅಥವಾ ಕರ್ನಾಟಕ ರಾಜ್ಯ ವೃತ್ತಿಪರ ಶಿಕ್ಷಣ ಪರಿಷತ್ತಿನಿಂದ ನೀಡಲಾದ ಅಕೌಂಟೆನ್ಸಿ ಮತ್ತು ಆಡಿಟಿಂಗ್ ಅಥವಾ ಅಕೌಂಟೆನ್ಸಿ ಮತ್ತು ಕಾಸ್ಟಿಂಗ್‌ನಲ್ಲಿ ಡಿಪ್ಲೊಮಾ ಹೊಂದಿರತಕ್ಕದ್ದು.<br><br>(i) Should have PUC qualification or Diploma in Accountancy and Auditing or in Accountancy and Costing awarded by the State Council of Vocational Education, Government of Karnataka. | (i) ಪದವಿ ಪೂರ್ವ ಮಂಡಳಿಯಿಂದ ನಡೆಸಲಾಗುವ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ಐ.ಎಸ್.ಸಿ ಅಥವಾ ಸಿ.ಬಿ.ಎಸ್.ಸಿ. ಮಂಡಳಿಯಿಂದ ನಡೆಸಲಾಗುವ 12ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣತೆ.<br><br>(i) Should have passed in 2nd Year PUC Examination conducted by Pre-University Board or pass in Class-12 examination conducted by ISC or CBSE Board |

ಇನ್ನುಳಿದಂತೆ, ಕ್ರಮ ಸಂಖ್ಯೆ: 8(ಎ)(i)-ಕಿರಿಯ ಸಹಾಯಕ ಹುದ್ದೆಗೆ ಸಂಬಂಧಿಸಿದಂತೆ ನೌಕರಿ ಭರ್ತಿ ವಿಧಾನ ಮತ್ತು ಕನಿಷ್ಠ ಅರ್ಹತೆಯ ಇತರೆ ಅಂಶಗಳಿಗೆ ಯಾವುದೇ ಬದಲಾವಣೆಗಳಿರುವುದಿಲ್ಲ.

ನಿರ್ದೇಶಕರು (ಆ. ಮತ್ತು ಮಾ.ಸಂ.)
ಕವಿಪ್ರನಿನಿ